

ಸರ್ಕಾರ ಹೊರಿಸಿದೆ.
ಭಯೋತ್ಪಾದಕರನ್ನು
ಸರ್ಕಾರ ಹಿಡಿಯುವಲ್ಲಿ ಸೋತಿದೆ
ಎಂಬ ಹಣೆಪಟ್ಟಿಯಿಂದ ತಪ್ಪಿಸಿಕೊಳ್ಳಲು
ಈ ಆರೋಪ. ನಾಳೆ ಪೊಲೀಸರು ತನ್ನ ಮಗನನ್ನು ಜೈಲಿಗೆ ಒಯ್ಯುತ್ತಾರೆ ಎನ್ನುವ ಸುದ್ದಿ ಆ ತಾಯಿಗೆ ತಿಳಿಯುತ್ತದೆ. ರಾಜಮನೆತನದ ಮರ್ಯಾದೆಯನ್ನು ಉಳಿಸಲು ಅವಳು ಅನ್ನಕ್ಕೆ ವಿಷಬೆರೆಸಿ ಮಗನಿಗೆ ಕೊಟ್ಟಿದ್ದಾಳೆ. ಅಪ್ಪ ಮನೆಗೆ ಬಂದು ನೋಡಿದಾಗ ಮಗ ಶವವಾಗಿರುತ್ತಾನೆ. ಮಗನ ಸಾವನ್ನು ಕಂಡ ತಂದೆ, ಏಕಕಾಲದಲ್ಲಿ ದಿಗ್ಭ್ರಮೆಗೆ, ಕೋಪಕ್ಕೆ, ಅತೀವ ದುಃಖಕ್ಕೆ ಒಳಗಾಗುವ ಸನ್ನಿವೇಶವದು. ಈ ದೃಶ್ಯದಲ್ಲಿ ಅಪ್ಪನ ನಟನೆ ಸರಿಯಾಗಿ ಬರುತ್ತಿಲ್ಲ ಎಂಬುದು ಸೂರ್ಯತೇಜರ ಅನಿಸಿಕೆ. ಸ್ವಂತ ಮಗನನ್ನು ಕಳೆದುಕೊಂಡ ಆ ವೇದನೆಯನ್ನು ಅನುಭವಿಸಿ ನಟಿಸುತ್ತಿಲ್ಲ, ಇನ್ನೂ ಪರಿಣಾಮಕಾರಿಯಾಗಿ ಬರಬೇಕು ಎಂದು ಕಳೆದ ಮೂರು ದಿನಗಳಿಂದ ನಟನಿಗೆ ಹೇಳುತ್ತಲೇ ಬಂದಿದ್ದಾರೆ. ನಟನೆಯಲ್ಲಿ ಅಂತಹ ಕೊರತೆಯೇನೂ ಕಾಣಿಸುತ್ತಿಲ್ಲ ಎಂಬುದು ಅಲ್ಲಿರುವ ಕಲಾವಿದರ ಮತ್ತು ಸಹ ನಿರ್ದೇಶಕರ ಅಭಿಪ್ರಾಯ. ಅಲ್ಲದೆ ಪ್ರತಿಬಾರಿಯೂ ಅಪ್ಪನ ಪಾತ್ರವನ್ನು ಮಾಡಿತೋರಿಸುವಾಗ ಸೂರ್ಯತೇಜರ ಕಣ್ಣಲ್ಲಿ ಸಹಜವಾಗಿ ನೀರು ತುಂಬಿಬರುತ್ತಿದ್ದುದು ಏಕೆಂಬುದು ಪ್ರಶ್ನೆಯಾಗಿ ಎಲ್ಲರನ್ನು ಕಾಡತೊಡಗಿತ್ತು.

"ನನ್ನನ್ನು ನಾನು ಹಿಡಿತದಲ್ಲಿಟ್ಟುಕೊಳ್ಳಲಾಗುತ್ತಿಲ್ಲ. ನೀವು ಚೆನ್ನಾಗಿಯೇ ಅಭಿನಯಿಸಿರಬಹುದು. ಆದರೆ ನನ್ನ ಮನಸ್ಸಿಗೆ ಒಪ್ಪಿಗೆಯಾಗುತ್ತಿಲ್ಲ. ನಾಳೆ ಒಂದು ಟ್ರಯಲ್ ಮಾಡಿ ಬಿಡುವ ಸಾಕು.